159ನೇ೦
(12)

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ-72ರಡಿ ನೀಡಿರುವ ಸೂಚನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಉತ್ತರ.**

**ವಿಷಯ:**

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಇತ್ತೀಚೆಗೆ ಹೊಸದಾಗಿ ಜಿಲ್ಲೆಗೊಂದರಂತೆ 08 ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಲಾಗಿದೆ. ಇವುಗಳಲ್ಲದೆ ಹಲವಾರು ಸರ್ಕಾರಿ ಪದವಿ ಕಾಲೇಜುಗಳನ್ನು ಕ್ಲಸ್ಟರ್ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಲಾಗಿದೆ. ಈ ವಿಶ್ವವಿದ್ಯಾಲಗಳಲ್ಲಿ ವಿನೂತನ ಮಾದರಿಯ ಗರಿಷ್ಠ ತಂತ್ರಜ್ಞಾನ ಬಳಕೆಯೊಂದಿಗೆ ಹೆಚ್ಚುವರಿ ಮಾನವ ಸಂಪನ್ಮೂಲ ಬಳಸದೆ ಕಾರ್ಯನಿರ್ವಹಿಸಲಿವೆ ಎಂದು ತಿಳಿಸಲಾಗಿದೆ. ಈ ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ ಜಮೀನನ್ನಾಗಲಿ ವಾಹನವನ್ನಾಗಲಿ ಖರೀದಿಸುವಂತಿಲ್ಲ ಹಾಗು ಹೊಸ ಕಟ್ಟಡಗಳನ್ನು ನಿರ್ಮಿಸುವಂತಿಲ್ಲ ಹಾಗು ಯಾವುದೇ ಹೊಸ ಹುದ್ದೆಗಳನ್ನು ತುಂಬುವಂತಿಲ್ಲ ಎಂದು ಷರತ್ತುಗಳನ್ನು ಹಾಕಿ ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಲಾಗಿದೆ. ಇದರಿಂದ ಈ ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿದ ನಂತರ ಯಾವುದೇ ಸರ್ಕಾರದಿಂದ ಯಾವುದೇ ಹಣಕಾಸಿನ ನೆರವು ನೀಡದೆ ಹೊಸ ಹುದ್ದೆಗಳನ್ನು ತುಂಬಲು ಅನುಮತಿ ನೀಡದೆ ಇರುವುದರಿಂದ ವಿಶ್ವವಿದ್ಯಾನಿಲಯಗಳನ್ನು ನಡೆಸಲು ಸಾದ್ಯವಾಗದೆ ಶೈಕ್ಷಣಿಕವಾಗಿ ಹಲವಾರು ಸಮಸ್ಯೆಗಳು ಸೃಷ್ಟಿಯಾಗಿವೆ. ಇದರಿಂದ ಈ ವಿಶ್ವವಿದ್ಯಾನಿಲಯಗಳಲ್ಲವು ಮೂಲಭೂತ ಸೌಲಭ್ಯಗಳ ಕೊರತೆಯಿಂದ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವು ತುಂಬಾ ಕಡಿಮೆಯಾಗುತ್ತಿದ್ದು ಹಲವಾರು ಸಮಸ್ಯೆಗಳು ಆಗುತ್ತಿರುವ ವಿಷಯವನ್ನು ನಿಯಮ 72 ರಡಿಯಲ್ಲಿ ಉನ್ನತ ಶಿಕ್ಷಣ ಸಚಿವರಲ್ಲಿ ಪ್ರಸ್ತಾಪಿಸುತ್ತೇವೆ

**ಉತ್ತರ:**

2022-23ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ 103ರನ್ವಯ ರಾಜ್ಯದಲ್ಲಿ ನೂತನವಾಗಿ ಈ ಕೆಳಕಂಡ 07 ಹೊಸ ವಿಶ್ವವಿದ್ಯಾಲಯಗಳನ್ನು ಕೆಲವು ಷರತ್ತುಗಳೊಂದಿಗೆ 2023ರಲ್ಲಿ ಸ್ಥಾಪನೆ ಮಾಡಲಾಗಿರುತ್ತದೆ.

| **ಕ್ರ.ಸಂ** | **ಹೊಸ ವಿಶ್ವವಿದ್ಯಾಲಯಗಳು** | **ಮಾತೃ ವಿಶ್ವವಿದ್ಯಾಲಯ** |
|---|---|---|
| 1 | ಹಾಸನ ವಿಶ್ವವಿದ್ಯಾಲಯ | ಮೈಸೂರು ವಿಶ್ವವಿದ್ಯಾಲಯ |
| 2 | ಚಾಮರಾಜನಗರ ವಿಶ್ವವಿದ್ಯಾಲಯ | ಮೈಸೂರು ವಿಶ್ವವಿದ್ಯಾಲಯ |
| 3 | ಕೊಡಗು ವಿಶ್ವವಿದ್ಯಾಲಯ | ಮಂಗಳೂರು ವಿಶ್ವವಿದ್ಯಾಲಯ |
| 4 | ಬೀದರ್ ವಿಶ್ವವಿದ್ಯಾಲಯ | ಗುಲ್ಬರ್ಗಾ ವಿಶ್ವವಿದ್ಯಾಲಯ |
| 5 | ಹಾವೇರಿ ವಿಶ್ವವಿದ್ಯಾಲಯ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| 6 | ಬಾಗಲಕೋಟೆ ವಿಶ್ವವಿದ್ಯಾಲಯ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. |
| 7 | ಕೊಪ್ಪಳ ವಿಶ್ವವಿದ್ಯಾಲಯ | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ |

**ಷರತ್ತುಗಳು:**

- ಈ ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ ಯಾವುದೇ ಜಮೀನನ್ನಾಗಲಿ, ವಾಹನವನ್ನಾಗಿ ಖರೀದಿಸುವಂತಿಲ್ಲ ಹಾಗು ಹೊಸ ಕಟ್ಟಡಗಳನ್ನು ನಿರ್ಮಿಸುವಂತಿಲ್ಲ ಈಗಾಗಲೇ ಮಾತೃ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಹುದ್ದೆಗಳಲ್ಲಿ ಅವಶ್ಯ ಹುದ್ದೆಗಳನ್ನು ಬಳಸಿಕೊಳ್ಳುವುದು ಹಾಗೂ ಯಾವುದೇ ಹೊಸ ಹುದ್ದೆಗಳನ್ನು ಸೃಜಿಸುವಂತಿಲ್ಲ.

- ಈ ವಿಶ್ವವಿದ್ಯಾನಿಲಯಗಳು ಸಂಪೂರ್ಣವಾಗಿ digital Entrepreneurial (ಕೌಶಲ್ಯಾಧಾರಿತ) "Earn while you learn" ಮಾದರಿಯಂತೆ ಕಾರ್ಯನಿರ್ವಹಿಸುವುದು.

....2

- ಈ ವಿಶ್ವವಿದ್ಯಾಲಯಗಳು ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿ ತಂತ್ರಜ್ಞಾನದ ಗರಿಷ್ಠ ಬಳಕೆಯೊಂದಿಗೆ ಹೆಚ್ಚುವರಿ ಮಾನವ ಸಂಪನ್ಮೂಲ ಉಪಯೋಗಿಸದೇ ಸ್ನಾತಕೋತ್ತರ ಕೇಂದ್ರಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ವಿನೂತನ ಮಾದರಿಯಂತೆ ಕಾರ್ಯನಿರ್ವಹಿಸುವುದು.

ಈ ವಿಶ್ವವಿದ್ಯಾಲಯಗಳು ಸ್ನಾತಕೋತ್ತರ ಕೇಂದ್ರಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಳ್ಳುವುದು. ಈ ವಿಶ್ವವಿದ್ಯಾಲಯಗಳು ಸರ್ಕಾರದಿಂದ ವಾರ್ಷಿಕ ರೂ. 2.00 ಕೋಟಿಗಳ ಆವರ್ತಕ ವೆಚ್ಚ ಬಳಸಿ ಕಾರ್ಯನಿರ್ವಹಿಸುತ್ತಿವೆ.

ಮುಂದುವರೆದು, ಶೈಕ್ಷಣಿಕ ಔನತ್ಯ ಹೊಂದಿದ ಕಾಲೇಜುಗಳನ್ನು ಮೇಲ್ದರ್ಜೆಗೇರಿಸುವ ಉದ್ದೇಶದಿಂದ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಿಂದ ಬೇರ್ಪಡಿಸುವ ಮೂಲಕ (i) ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, (ii) ಬೆಂಗಳೂರಿನ ಮಹಿಳಾ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಹಾಗೂ (iii)ಹೆಚ್.ಡಿ ಕೇಂದ್ರೀಯ ಮಹಿಳಾ ಗೃಹ ವಿಜ್ಞಾನ ಕಾಲೇಜಗಳು ಸಹಭಾಗಿ ಅಂಗ ಕಾಲೇಜುಗಳಾಗಿರುವ ಏಕಾತ್ಮಕ ಸ್ವರೂಪದ ಮಹಾರಾಣಿ ಸಮೂಹ ವಿಶ್ವವಿದ್ಯಾಲಯವನ್ನು ಸಂಪನ್ಮೂಲಗಳನ್ನು ಸಂಚಿತಗೊಳಿಸಿ ಮತ್ತು ಉನ್ನತೀಕರಿಸಿ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿರುತ್ತದೆ ಹಾಗೂ ಸರ್ಕಾರಿ ವಿಜ್ಞಾನ (ಸ್ವಾಯತ್ತ) ಕಾಲೇಜು, ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವುದರಿಂದ, ಕನ್ನಡದ ಅಸ್ಮಿತೆಯು ಆಗಿರುವ ಕನ್ನಡದ ಪ್ರಥಮ ರಾಜಕವಿ ಅಮೋಘವರ್ಷ ನೃಪತುಂಗರವರ ಗೌರವಾರ್ಥ ಮತ್ತು ರಾಜ್ಯದಲ್ಲಿ ಈ ವಿಶ್ವವಿದ್ಯಾಲಯವನ್ನು "ನಳಂದ" ಮತ್ತು "ತಕ್ಷಶಿಲಾ" ಮಾದರಿಯಲ್ಲಿ ಅಭಿವೃದ್ಧಿಪಡಿಸಲು "ನೃಪತುಂಗ ವಿಶ್ವ ವಿದ್ಯಾಲಯವೆಂಬ" ಹೆಸರಿನಿಂದ ಸ್ಥಾಪನೆ ಮಾಡಲಾಗಿದ್ದು, ಸದರಿ ವಿಶ್ವವಿದ್ಯಾಲಯಗಳು ರೂಸಾ ಅನುದಾನದಡಿಯಲ್ಲಿ ಸ್ಥಾಪಿತವಾಗಿರುತ್ತವೆ.

ಮೇಲ್ಕಂಡ ಹೊಸ ವಿಶ್ವವಿದ್ಯಾಲಯಗಳನ್ನು ಒಳಗೊಂಡಂತೆ ರಾಜ್ಯದಲ್ಲಿರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಬೋಧಕ/ಬೋಧಕೇತರ ಹುದ್ದೆಗಳು, ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಸರ್ಕಾರದ ಗಮನದಲ್ಲಿದ್ದು, ಇಂತಹ ಕೊರತೆಗಳನ್ನು ನಿವಾರಿಸಲು ರಾಜ್ಯದಲ್ಲಿರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವಂತೆ ಸರ್ಕಾರದಿಂದ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಆರ್ಥಿಕ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ವಿಶ್ವವಿದ್ಯಾಲಯಗಳ ಸಂಶೋಧನೆ, ಮೂಲಸೌಲಭ್ಯ, ಅನುದಾನ, ಪಿಂಚಣಿ ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಅನುಕೂಲವಾಗುವಂತೆ ಅಗತ್ಯ ಹುದ್ದೆಗಳ ನೇಮಕಾತಿ ಹಾಗೂ ಇತ್ಯಾದಿ ಅವಶ್ಯಕ ವಿಷಯಗಳ ಕುರಿತು ಹಲವು ಸಭೆಗಳನ್ನು ನಡೆಸಿದ್ದು, ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳನ್ನು ಬಲವರ್ಧನೆಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿರುತ್ತದೆ. ಪ್ರಸ್ತುತ ಮಂತ್ರಿ ಮಂಡಲವು ಪುನರ್ ರಚನೆಗೊಂಡಿರುವುದರಿಂದ ಸಚಿವ ಸಂಪುಟ ಉಪಸಮಿತಿಯನ್ನು ಪುನರ್ ರಚಿಸುವ ಕುರಿತಂತೆ ಪರಿಶೀಲಿಸಲಾಗುತ್ತಿದೆ.

****

**ಸಂಖ್ಯೆ**: ಇಡಿ 175 ಯುಎನ್‌ಇ 2026

**(ಬಸವರಾಜ ರಾಯರಡ್ಡಿ)**
ಉನ್ನತ ಶಿಕ್ಷಣ ಸಚಿವರು